**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನಸಭೆ**

**ಎಂಟನೇ ಅಧಿವೇಶನ**

**(ಮುಂದುವರೆದ ಉಪವೇಶನಗಳು)**

# ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 39)**

ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಅರಣ್ಯ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 98ಎ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ 5) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 98ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ,–

(i) "ಶೇಕಡಾ ಎಂಟರ" ಎಂಬ ಪದಗಳಿಗೆ "ಶೇಕಡಾ ಹನ್ನೆರಡರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**3. 98ಬಿ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 98ಬಿ ಪ್ರಕರಣದ, (4)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(4) ಸದರಿ ನಿಧಿಯ ಜಮೆಯಲ್ಲಿನ ಮೊಬಲಗನ್ನು ಈ ಕೆಳಕಂಡ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗಾಗಿ ಮಾತ್ರ ವೆಚ್ಚ ಮಾಡತಕ್ಕದ್ದು, ಎಂದರೆ:–

(ಎ) ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸುವುದು ಮತ್ತು ಅದಕ್ಕೆ ಪೂರಕವಾದ ಅಂಥ ಇತರ ಉದ್ದೇಶಗಳಿಗೆ ಎಂದರೆ ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾರ್ಯಗಳಿಗೆ;

(ಬಿ) ಅಧಿಸೂಚಿತ ಅರಣ್ಯ ಪ್ರದೇಶಗಳ ಗಡಿಗಳನ್ನು ಒಟ್ಟುಗೂಡಿಸುವುದು;

(ಸಿ) ಅರಣ್ಯಗಳನ್ನು ಒಟ್ಟುಗೂಡಿಸುವುದಕ್ಕಾಗಿ ಖಾಸಗಿ ಭೂಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು;

(ಡಿ) ಮುಂಚೂಣಿ ಸಿಬ್ಬಂದಿಗಳಿಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅರಣ್ಯ ನಿವಾಸಗಳ ರಚನೆ ಮತ್ತು ನಿರ್ವಹಣೆ;

(ಇ) ತರಬೇತಿ, ಸಾಮರ್ಥ್ಯ ವೃದ್ಧಿ, ಸಂಶೋಧನೆ ಮತ್ತು ತಂತ್ರಜ್ಞಾನ;

(ಎಫ್) ಜಂಟಿ ಅರಣ್ಯ ಯೋಜನೆಯನ್ನು ಮತ್ತು ನಿರ್ವಹಣೆಯ ಚಟುವಟಿಕೆಗಳನ್ನು ಹಾಗೂ ಗ್ರಾಮ ಅರಣ್ಯ ಸಮಿತಿಗಳು/ಪರಿಸರ ಅಭಿವೃದ್ಧಿ ಸಮಿತಿಗಳನ್ನು ಸಮರ್ಥಗೊಳಿಸುವುದು;

(ಜಿ) ಆಂತರಿಕ ಅರಣ್ಯ ಪ್ರದೇಶಗಳಿಂದ ಜನರನ್ನು ಪುನರ್ವಸತಿಗೊಳಿಸುವುದು ಮತ್ತು ಪುನರ್‌ಸ್ಥಾಪಿಸುವುದು;

(ಎಚ್) ಅರಣ್ಯ ಅಭಿವೃದ್ಧಿ ಅಥವಾ ನಿರ್ವಹಣೆ ಅಥವಾ ವನ್ಯಜೀವಿ ರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಇತರ ಚಟುವಟಿಕೆಗಳು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಅರಣ್ಯ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 5),-

(1) ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಹೆಚ್ಚಿಸುವುದಕ್ಕೆ;

(2) ಅರಣ್ಯಗಳ ಮತ್ತು ವನ್ಯಜೀವಿ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಿಗೆ ಅರಣ್ಯ ಅಭಿವೃದ್ಧಿ ನಿಧಿಯನ್ನು ಬಳಸುವುದಕ್ಕೆ,

– ಉಪಬಂಧಗಳನ್ನು ಕಲ್ಪಿಸಲು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚನ್ನು ಒಳಗೊಂಡಿರುವುದಿಲ್ಲ.

**ಬಿ. ರಮಾನಾಥ ರೈ**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

**ಎಸ್. ವೈ. ಕುಳಗೇರಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ 5) ಉದ್ಧೃತ ಭಾಗ

**XX** **XX** **XX**

**98ಎ. ಅರಣ್ಯ ಅಭಿವೃದ್ಧಿ ತೆರಿಗೆಯನ್ನು ವಿಧಿಸುವುದು : (1)** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರ ಅಥವಾ ಅದರ ಒಡೆತನ ಅಥವಾ ನಿಯಂತ್ರಣದಲ್ಲಿನ ಒಂದು ನಿಗಮದ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಒಂದು ನಿಕಾಯವು ಮಾರಾಟದ ಮೂಲಕ ಅಥವಾ ಅನ್ಯಥಾ ವಿಲೆ ಮಾಡಿದ ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ, ಆ ಬಗ್ಗೆ ಸಂದಾಯ ಮಾಡಿದ ಪ್ರತಿಫಲ ಧನದ ಮೊಬಲಿಗಿನ ಮೇಲೆ ಶೇಕಡಾ ಎಂಟರ ದರದಂತೆ ತೆರಿಗೆಯು ವಿಧಿಸಲ್ಪಡತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯವಾಗತಕ್ಕದ್ದು:

ಪರಂತು, (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳ ಅಥವಾ ಕೈಗಾರಿಕೆಗಳ ಪ್ರವರ್ಗಗಳಿಗೆ ಈ ಮುಂದಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಅರಣ್ಯ ಉತ್ಪನ್ನಗಳ ವಿಲೆಯ ಮೇಲೆ ಈ ಉಪಪ್ರಕರಣದ ಅಡಿಯಲ್ಲಿ ವಿಧಿಸಿದ ಅಥವಾ ಸಂದಾಯ ಮಾಡಿದ ತೆರಿಗೆಯು, ಪ್ರತಿಫಲ ಧನದ ಮೊಬಲಗಿನ ಶೇಕಡಾ ಹನ್ನೆರಡರಷ್ಟಾಗಿರತಕ್ಕದ್ದು.

**XX** **XX** **XX**

**98ಬಿ. ಅರಣ್ಯ ಅಭಿವೃದ್ಧಿ ನಿಧಿ:- XX XX XX**

(4) ಸದರಿ ನಿಧಿಯ ಜಮೆಯಲ್ಲಿನ ಮೊಬಲಗನ್ನು ಅರಣ್ಯಗಳ ನೆಡುತೋಪುಗಳನ್ನು ಬೆಳೆಸಲು ಮತ್ತು ಅವುಗಳಿಗೆ ಅನುಷಂಗಿಕವಾಗಿರುವಂತೆ ಇತರೆ ಉದ್ದೇಶಗಳಿಗಾಗಿ ಹೊರತು ಉಳಿದವುಗಳಿಗೆ ವೆಚ್ಚ ಮಾಡತಕ್ಕದಲ್ಲ.

**XX** **XX** **XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 31ನೇ ಜುಲೈ, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**EIGHTH SESSION**

**(ADJOURNED MEETINGS)**

# THE KARNATAKA FOREST (AMENDMENT) BILL, 2015

**(L.A. Bill No. 39 of 2015)**

A Bill further to amend the Karnataka Forest Act, 1963.

Whereas it is expedient further to amend the Karnataka Forest Act, 1963 (Karnataka Act 5 of 1964), for the purposes hereinafter appearing;

Be it enacted by the Karnataka State Legislature in the Sixty sixth year of the Republic of India as follows:-

**1. Short title and commencement.-** (1) This Act may be called the Karnataka Forest (Amendment) Act, 2015.

(2) It shall come into force at once.

**2. Amendment of section 98A.-** In the Karnataka Forest Act, 1963 (Karnataka Act 5 of 1964) (hereinafter referred to as the principal Act), in section 98A, in sub-section (1),-

(i) for the words "eight percent" the words "twelve percent" shall be substituted; and,

(ii) the first proviso shall be omitted.

**3. Amendment of section 98B.-** In section 98B of the Principal Act, for sub-section (4), the following shall be substituted, namely:-

"(4). The amount at credit of the said fund shall be expended only for one or more of the following purposes, namely:-

(a) raising of plantations in notified forest areas and such other purposes as are ancillary thereto namely soil and moisture conservation works in notified forest areas;

(b) consolidation of the boundaries of notified forest areas;

(c) Acquisition of private areas for the consolidation of forests;

(d) construction and maintenance of forest housing in rural areas for frontline staff;

(e) training, capacity building, research and technology;

(f) sustaining Joint Forest Planning and Management activities and the Village Forest Committees/eco development committees;

(g) rehabilitation and resettlement of people from interior forest areas;

(h) such other activities relating to Forest development or management or wild life protection and management as may be notified by the State Government from time to time".

## STATEMENT OF OBJECTS AND REASONS

It is considered necessary to further to amend the Karnataka Forest Act, 1963, (Karnataka Act 5 of 1964) to,-

(1) increase the forest development tax;

(2) utilize the forest Development fund for all activities related to development and management of forests and wildlife.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**B.RAMANATHA RAI**
Minister for Forest
Ecology and Environment

**S.Y. KULAGERI**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA FOREST ACT, 1963 (KARNATAKA ACT 5 OF 1964)

**XX** **XX** **XX**

**98A. Levy of Forest Development Tax.**—(1) Notwithstanding anything contained in this Act, in respect of forest produce disposed of by the State Government or by a corporation, owned or controlled by or a body notified by the State Government by sale or otherwise, there shall be levied and paid to the State Government a tax at the rate of eight percent on the amount of consideration paid therefor.

Provided that the tax levied and paid under this sub-section on the disposal of forest produce specified in column (2) of the Table below to the categories of persons or industries specified in column (3) thereof shall be twelve per cent on the amount of consideration.

**XX** **XX** **XX**

**98B. Forest Development Fund.**- **XX** **XX** **XX**

(4) The amount at the credit of the said fund shall not be expended except for the raising of forest plantation and for such other purpose as are ancillary thereto.

XX XX XX

Government Press, Vikasa Soudha, Bengaluru, P7, W.D. , Copies 750, 18th, 2015